10

# ನ್ಯಾಯ ತೀರ್ವಿಕೆ

*"ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು" (ಪ್ರಕಟನೆ 20:12, 13).*

ಮರಣದ ಸಮಯದಲ್ಲಿ ಪ್ರಾಣ ಮತ್ತು ಆತ್ಮವು ದೇಹದಿಂದ ಹೇಡೆಸ್‌ನಲ್ಲಿರುವ ಎರಡು ಸ್ಥಳಗಳಲ್ಲಿ ಒಂದಕ್ಕೆ ಒಯ್ಯಲ್ಪಡಲು ಅಗಲಿ ಹೋಗುವವು: ಪರದೈಸದ ವಿಶ್ರಾಂತಿ ಮತ್ತು ಸುಖಕ್ಕೆ (ಲೂಕ 23:43; 2 ಕೊರಿಂಥ 12:4; ಪ್ರಕಟನೆ 2:7) ಇಲ್ಲವೇ ಟಾರ್ಟರಸ್‌ದ ಯಾತನೆಗಳಿಗೆ[1] (2 ಪೇತ್ರ 2:4) ಒಯ್ಯಲ್ಪಡುವವು. ದೇಹವು ಬಹುಶಃ ಸಮಾಧಿಯಲ್ಲಿ ಹೂಣಲ್ಪಡುವುದು. ಒಂದು ದಿನ ಯೇಸುವು ಸತ್ತವರ ದೇಹಗಳನ್ನು ಎಬ್ಬಿಸಲು ಮತ್ತು ಜೀವಿತರೊಂದಿಗೆ ಸತ್ತವರನ್ನು ಕೂಡಿಸುವದಕ್ಕಾಗಿ, ನ್ಯಾಯ ತೀರ್ವಿಕೆಯಲ್ಲಿ ಆತನ ಮುಂದೆ ನಿಲ್ಲುವದಕ್ಕಾಗಿ ಕೂಡಿಸಲು ಹಿಂದಿರುಗಿ ಬರುವನು. ಇದು ಈ ಯುಗದ ಅಂತ್ಯದಲ್ಲಿರುವ ಸುಗ್ಗಿಯ ಸಮಯದಲ್ಲಿ ಸಂಭವಿಸುವುದು (ಮತ್ತಾಯ 13:39).

ಮಾನವ ಚರಿತ್ರೆಯಲ್ಲೆಲ್ಲಾ ದೇವರು ವಿವಿಧ ಜನರಿಗೆ, ಗುಂಪುಗಳಿಗೆ ಮತ್ತು ಜನಾಂಗಗಳಿಗೆ ನ್ಯಾಯ ತೀರಿಸಿರುವನು ಮತ್ತು ಶಿಕ್ಷಿಸಿರುವನು.[2] ಇದು ಮನುಷ್ಯನ ಪ್ರತಿಯೊಂದು ಕೃತ್ಯವನ್ನು ನ್ಯಾಯತೀರ್ಪಿನೊಳಗೆ ಆತನು ತರುವನು ಎಂಬುದರ ಎಚ್ಚರಿಕೆ ಯಾಗಿರತಕ್ಕದ್ದು. ಈ ಜೀವನದಲ್ಲಿ ಪ್ರತಿಯೊಂದು ಕೃತ್ಯಕ್ಕೆ ಬಹುಮಾನ ವಾಗಲೀ ಇಲ್ಲವೇ ಶಿಕ್ಷೆಯಾಗಲೀ ಕೊಡಲ್ಪಡುವದಿಲ್ಲ, ಆದರೆ ದೇವರು ನಿತ್ಯತ್ವದಲ್ಲಿ ಪ್ರತಿಯೊಂದು ಕೃತ್ಯಕ್ಕೆ ನ್ಯಾಯತೀರಿಸುವನು ಹಾಗೂ ಎಲ್ಲಾ ಲೆಕ್ಕಾಚಾರವನ್ನು ತೀರಿಸುವನು. ನ್ಯಾಯ ತೀರ್ವಿಕೆಯ ದಿನವು "ಕಡೇ ದಿನ" (ಯೋಹಾನ 12:48), "ಕೋಪದ ದಿನ" (ರೋಮಾಪುರ 2:5), "ಕ್ರಿಸ್ತನ ದಿನ" (ಫಿಲಿಪ್ಪಿ 1:6, 10), "ಆ ದಿನ" (2 ಥೆಸಲೊನೀಕ 1:10), "ಗೊತ್ತು ಮಾಡಿದ" ದಿನ (ಅಪೊಸ್ತಲರ ಕೃತ್ಯ 17:31), "ನ್ಯಾಯ ತೀರ್ವಿಕೆಯ ದಿನ" (1 ಯೋಹಾನ 4:17) ಮತ್ತು "ಮಹಾ ದಿನ" (ಯೂದ 6) ಎಂದು ಕರೆಯಲ್ಪಟ್ಟಿರುವುದು.

ಅದು "ಕರ್ತನ ದಿನ" ಎಂದು ಕರೆಯಲ್ಪಟ್ಟಿರುವದಿಲ್ಲ, ಯಾಕಂದರೆ "ಕರ್ತನ[3] ದಿನವು" ಪ್ರಕಟನೆ 1:10ರಲ್ಲಿ ಭಾನುವಾರವಾಗಿದೆ ಮತ್ತು ನ್ಯಾಯ ತೀರ್ವಿಕೆಯ ದಿನದೊಂದಿಗೆ ಕೆಲವರು ಮಾಡಿದಂತೆ ಗಲಿಬಿಲಿಗೊಳಿಸ ಬಾರದು:

> ಕೆಲವರು ["on the Lord's day"; ಪ್ರಕಟನೆ 1:10] ಕೇವಲ "the day of the Lord," ಎಂಬುದಕ್ಕೆ ಬದಲಾಗಿ ಇರುವ ಹೆಸರು ಎಂದು ವಾದಿಸಿದರೂ, ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿ ನ್ಯಾಯತೀರ್ವಿಕೆಯ ದಿನಕ್ಕಾಗಿ ಪುನಃ

ಪುನಃ ಉಪಯೋಗಿಸಲ್ಪಟ್ಟಿದೆ ... ಹೆಚ್ಚಾದ ಪಂಡಿತರು ಇದು ಭಾನುವಾರಕ್ಕೆ ಸಂಬಂಧಿಸಿದೆ ಎಂದು ತೀರ್ಮಾನಿಸಿದ್ದಾರೆ ... . ಈ ತೀರ್ಮಾನವು ಮೊದಲಿನ ಅನಧಿಕೃತ ಕ್ರೈಸ್ತ ಬರಹಗಳಲ್ಲಿ (ಉದಾಹರಣೆ ದಿದಖ 14:1; ಇಗ್ನೇಷಿಯಸ್, ಮಗ್ನೆಷಿಯನ್ಸ್ 9:1; ಅಲೆಕ್ಸಾಂದ್ರಿಯದ ಕ್ಲೆಮೆಂಟ, ಸ್ಟ್ರೋಮಾಟ, 7:12; ಟೆರ್ಟುಲ್ಲಿಯನ್, ಆನ್ ಐಡೊಲೆಟ್ರಿ, ಆಧ್ಯಾಯ 14) ಭಾನುವಾರಕ್ಕೆ ಸಂಬಂಧಿಸಿ "ಕರ್ತನ ದಿನವು" ಪುನಃ ಪುನಃ ಉಪಯೋಗಿಸಿದ್ದರಿಂದ ಸ್ಥಾಪಿಸಲ್ಪಟ್ಟಿರುವುದು.[4]

## ಅದರ ಸಮಯ

ಯೇಸುವು ಪುನಃ ಬರುವಾಗ ನ್ಯಾಯತೀರ್ವಿಕೆಯು ಆಗುವುದು (ಮತ್ತಾಯ 25:31-33; ಪ್ರಕಟನೆ 20:11, 12), ಅದು ಯಾವಾಗ ಸಂಭವಿಸುವುದು ಎಂಬುದನ್ನು ತಂದೆಯು ಮಾತ್ರವೇ ತಿಳಿದಿರುವನೆಂದು ಯೇಸುವು ಹೇಳಿದನು (ಮತ್ತಾಯ 24:36), ನ್ಯಾಯ ತೀರ್ವಿಕೆಯ ದಿನವು ಬರುವ ದಿನಾಂಕವನ್ನು ಭೂಲೋಕದಲ್ಲಿ ಯಾರೂ ತಿಳಿದಿರುವದಿಲ್ಲ ಎಂದು ಇದರ ಅರ್ಥ.

## ಅದರ ಖಚಿತತೆ

ದೇವರು ಯಾವಾಗ ನ್ಯಾಯತೀರಿಸುವನು ಎಂಬುದು ಆತನು ನ್ಯಾಯತೀರಿಸುವನು ಎಂಬ ಸಂಗತಿಯಷ್ಟು ಮಹತ್ವದ್ದಾಗಿರುವದಿಲ್ಲ. "ಒಳ್ಳೇದಾಗಲೀ ಕೆಟ್ಟದಾಗಲೀ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿ ಮಾಡುವನು" (ಪ್ರಸಂಗಿ 12:14) ಎಂದು ಬೈಬಲ್ ಎಚ್ಚರಿಸುತ್ತದೆ.

ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ್ದರಿಂದ ಎಲ್ಲರಿಗೆ ಭರವಸೆಯನ್ನು ಕೊಟ್ಟು, ದೇವರು ನೇಮಕ ಮಾಡಿದ ದಿನದಂದು ಆತನು ಲೋಕಕ್ಕೆ ನ್ಯಾಯವಿಚಾರಣೆ ಮಾಡುವನು (ಅಪೊಸ್ತಲರ ಕೃತ್ಯ 17:31). ನ್ಯಾಯ ತೀರಿಸುವಿಕೆಯು ಪ್ರತಿಯೊಬ್ಬರೂ ಕೈಕೊಳ್ಳಬೇಕಾದ ನೇಮಕವಾಗಿದೆ, "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10) ಎಂದು ಪೌಲನು ಘೋಷಿಸಿದನು.

## ಅದರ ಘಟಣೆಗಳು

ಆ ವಿಶೇಷವಾದ ನ್ಯಾಯತೀರ್ವಿಕೆಯ ದಿನದಂದು, ಎಲ್ಲಾ ಮಾನವ ಕುಲವು ನ್ಯಾಯ ತೀರ್ಪು ಹೊಂದುವುದು:

(1) ಯೇಸುವು ದೇವದೂತರೊಂದಿಗೆ (ಮತ್ತಾಯ 25:31), ಉರಿಯುವ ಬೆಂಕಿಯಲ್ಲಿ (2 ಥೆಸಲೊನೀಕ 1:7) ತನ್ನ ಎಲ್ಲಾ ಮಹಿಮೆಯೊಂದಿಗೆ ಪರಲೋಕ ದಿಂದ ಇಳಿದು ಬರುವನು ಮತ್ತು ತನ್ನ ಮಹಿಮೆಯುಳ್ಳ ಸಿಂಹಾಸನದ ಮೇಲೆ, ತನ್ನ ನ್ಯಾಯಾಸನದ ಮೇಲೆ (ಮತ್ತಾಯ 25:31, 32; ನೋಡಿರಿ 2 ಕೊರಿಂಥ 5:10; ಪ್ರಕಟನೆ 20:11) ಕುಳಿತು ಕೊಳ್ಳುವನು.

(2) ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸುವವು (ಪ್ರಕಟನೆ 20:13).

(3) ನಾವೆಲ್ಲರೂ, ಎಬ್ಬಿಸಲ್ಪಟ್ಟವರೂ ಮತ್ತು ಭೂಮಿಯ ಮೇಲೆ ಜೀವಿಸಿರುವವರೂ, ನ್ಯಾಯ ತೀರ್ಪು ಹೊಂದಲು (ಅಪೊಸ್ತಲರ ಕೃತ್ಯ 10:42; 2 ತಿಮೊಥೆ 4:1) ಯೇಸುವಿನ ಮುಂದೆ ಕಾಣಿಸಿಕೊಳ್ಳಲು (2 ಕೊರಿಂಥ 5:10; ಪ್ರಕಟನೆ 20:12) ದೇವದೂತರಿಂದ ಕೂಡಿಸಲ್ಪಡುವೆವು (ಮತ್ತಾಯ 13:39).

(4) ಆಕಾಶವೂ ಭೂಮಿಯೂ ನಾಶಪಡಿಸಲ್ಪಡುವವು (ಪ್ರಕಟನೆ 20:11; 2 ಪೇತ್ರ 3:7-12).

(5) ಪುಸ್ತಕಗಳು ತೆರೆಯಲ್ಪಡುವವು (ಪ್ರಕಟನೆ 20:12).

(6) ನಮ್ಮ ಕೃತ್ಯಗಳ ಪ್ರಕಾರವಾಗಿ, ಪುಸ್ತಕಗಳಲ್ಲಿ ಬರೆಯಲ್ಪಟ್ಟ ಸಂಗತಿಗಳಿಂದ ನಾವು ನ್ಯಾಯ ತೀರ್ಪು ಹೊಂದುವೆವು (ಯೋಹಾನ 12:48; ಪ್ರಕಟನೆ 20:13).

(7) ನೀತಿವಂತರು ಮೊದಲು ನ್ಯಾಯ ವಿಚಾರಣೆಗೆ ಗುರಿಯಾಗುವರು (ಮತ್ತಾಯ 25:34-40; 1 ಪೇತ್ರ 4:17).

(8) ಅನಂತರ ದುಷ್ಟರು ನ್ಯಾಯವಿಚಾರಣೆಗೆ ಗುರಿಯಾಗುವರು (ಮತ್ತಾಯ 25:41-46).

(9) ತನ್ನ ನ್ಯಾಯತೀರಿಸುವಿಕೆಯ ಸರಿಯಾಗಿರುವಿಕೆಯನ್ನು ನಮಗೆ ತೋರಿಸಲು ಯೇಸುವು ನಮ್ಮ ದಾಖಲೆಗಳನ್ನು ಪುನರಾವಲೋಕನ ಮಾಡುವನು (ಮತ್ತಾಯ 25:34-46).

(10) ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ನಿತ್ಯ ಸ್ಥಳಗಳಿಗೆ ಕಳುಹಿಸಲ್ಪಡುವೆವು (ಮತ್ತಾಯ 25:34-46).

## ಅದರ ದೃಶ್ಯ ಜೋಡಣೆ

ದೇವರು ನ್ಯಾಯ ತೀರಿಸುವನು (ಕೀರ್ತನೆ 96:10; ನೋಡಿರಿ ಪ್ರಸಂಗಿ 12:14; ರೋಮಾಪುರ 2:3; 14:12; 1 ಕೊರಿಂಥ 5:13; ಇಬ್ರಿಯ 12:23) ಮತ್ತು ಒಬ್ಬನೇ ಒಬ್ಬ ನ್ಯಾಯಾಧೀಶನಿರುವನು (ಯಾಕೋಬ 4:12) ಎಂದು ಬೈಬಲು ಖಚಿತವಾಗಿ ಹೇಳುತ್ತದೆ. "ದೇವರು" ಎಂಬ ಅಂಕಿತವು ಕುಮಾರನಿಗೆ ಅದರಂತೆಯೇ ತಂದೆಗೆ ಅನ್ವಯಿಸಲ್ಪಡಬಹುದಾಗಿದ್ದರಿಂದ (ಯೋಹಾನ 1:1, 2) ಪ್ರಶ್ನೆಯು "ದೇವರು ನ್ಯಾಯ ತೀರಿಸುವನೋ?" ಎಂಬುದಾಗಿರುವದಿಲ್ಲ. ಪ್ರಶ್ನೆಯು, "ನ್ಯಾಯಾಧೀಶನು ತಂದೆಯೋ ಇಲ್ಲವೇ ಕುಮಾರನೋ?" ಎಂಬುದಾಗಿದೆ.

ತಂದೆಯು ನ್ಯಾಯ ತೀರ್ವಿಕೆಯಲ್ಲಿ ಒಳಗೊಂಡಿದ್ದರೂ, ಆತನು ಕುಮಾರನ, ಯೇಸುವಿನ ಮುಖಾಂತರ ನ್ಯಾಯವಿಚಾರಣೆ ಮಾಡುವನು (ಅಪೊಸ್ತಲರ ಕೃತ್ಯ 17:31; ರೋಮಾಪುರ 2:16); ಆದುದರಿಂದ ಅದನ್ನು ಹೀಗೆ ಹೇಳಬಹುದು, "ಇದಲ್ಲದೆ ತಂದೆಯು ಯಾರಿಗೂ ತೀರ್ಪುಮಾಡುವದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಕುಮಾರನಿಗೆ ಕೊಟ್ಟಿದ್ದಾನೆ" (ಯೋಹಾನ 5:22). ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳು ಈ ಸತ್ಯದೊಂದಿಗೆ ಒಪ್ಪಿಕೊಳ್ಳುತ್ತವೆ.[5] ದೇವರ ಮತ್ತು ಕ್ರಿಸ್ತನ ನ್ಯಾಯಾಸನಗಳು ಒಂದೇ ಒಂದಾಗಿರುತ್ತವೆ (ರೋಮಾಪುರ 14:10; 2 ಕೊರಿಂಥ 5:10).

ಕೆಲವರು ಚಿತ್ರಿಸಿದಂತೆ, ಯೇಸುವು ನಮ್ಮ ಪರವಾಗಿ ವಾದಿಸುವ ಯೇಸುವಿನೊಂದಿಗೆ ನ್ಯಾಯಾಸನದ ಮೇಲೆ ತಂದೆಯನ್ನು ನ್ಯಾಯತೀರ್ವಿಕೆಯ ದೃಶ್ಯವು ಕಂಡುಕೊಳ್ಳುವದಿಲ್ಲ. ಈಗ ಯೇಸು ಆ ಸ್ಥಾನದಲ್ಲಿ ಕಾರ್ಯ ಮಾಡುತ್ತಿದ್ದಾನೆ (1 ಯೊಹಾನ

2:1, 2). ನ್ಯಾಯತೀರ್ವಿಕೆಯ ದಿನದಂದು ಯೇಸುವು ತನ್ನ ಸಿಂಹಾಸನದ ಮೇಲೆ, ತನ್ನ ನ್ಯಾಯಾಸನದ ಮೇಲೆ ಕುಳಿತಿರುವ ನ್ಯಾಯಾಧೀಶನಾಗಿರುವನು (ಮತ್ತಾಯ 25:31, 32; 2 ಕೊರಿಂಥ 5:10), ಎಲ್ಲಾ ಜನರಿಗೆ ನ್ಯಾಯತೀರಿಸುವನು.

ಜಗತ್ತಿಗೆ ನ್ಯಾಯ ತೀರಿಸುವದರಲ್ಲಿ ಇತರರು ಒಳಗೊಳ್ಳುವದರ ಬಗ್ಗೆ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯದು, ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ಅಪೊಸ್ತಲರು ನ್ಯಾಯ ತೀರಿಸುವರೆಂದು ಯೇಸು ಹೇಳಿದನು (ಮತ್ತಾಯ 19:28). ನ್ಯಾಯ ವಿಚಾರಣೆಯನ್ನು ಅವರು ಯಾವಾಗ ಮಾಡುವರು. ಇಸ್ರಾಯೇಲ್ಯರ ಚರಿತ್ರೆಯಲ್ಲಿ ಮೊದಲು ನ್ಯಾಯಸ್ಥಾಪಕರು ಮಾಡಿದಂತೆ, ಈಗಿನ ಯುಗದಲ್ಲಿ ಆತ್ಮಿಕ ಅರ್ಥದಲ್ಲಿ ಅವರು ನ್ಯಾಯತೀರಿಸುವರೋ (ನ್ಯಾಯಸ್ಥಾಪಕರು 2:16), ಇಲ್ಲವೇ ಸಮಯದ ಅಂತ್ಯದಲ್ಲಿ ಅವರು ನ್ಯಾಯತೀರಿಸುವರೋ?

ಎರಡನೆಯದು, ದೇವಜನರು ಜಗತ್ತನ್ನೂ ದೇವದೂತರನ್ನೂ ಇಬ್ಬರನ್ನೂ ನ್ಯಾಯ ವಿಚಾರಣೆ ಮಾಡುವರು (1 ಕೊರಿಂಥ 6:2, 3). ನೋಹನು ದೇವರ ಜಗತ್ತನ್ನು ಖಂಡಿಸಿದ ರೀತಿಯಲ್ಲಿ, ಅವರು ದೇವರಿಗೆ ತಮ್ಮ ವಿಧೇಯತೆಯಿಂದ ನ್ಯಾಯ ತೀರಿಸುತ್ತಿರುವರೋ ಇಲ್ಲವೇ ಜ್ಯೂರಿಯಂತೆ ಯೇಸುವಿನೊಂದಿಗೆ ಕುಳಿತುಕೊಂಡು ತಮ್ಮ ತೀರ್ಪನ್ನು ಕೊಡುವರೋ?

ಮೂರನೆಯದು, ಹತಸಾಕ್ಷಿ ದೇವ ಜನರ (ಪರಿಶುದ್ಧರ) ಪ್ರಾಣಗಳು ಸಿಂಹಾಸನೆಗಳ ಮೇಲೆ ಇರುವಂತೆ ವಿವರಿಸಲ್ಪಟ್ಟಿವೆ. “ನ್ಯಾಯ ತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು” ಎಂದು ಪ್ರಕಟನೆ 20:4 ಹೇಳುತ್ತದೆ. ಇದನ್ನು ಅಕ್ಷರಶಃವಾಗಿ ತೆಗೆದು ಕೊಳ್ಳಬೇಕೋ? ಈ ನ್ಯಾಯ ತೀರ್ವಿವಿಕೆಯು ಅಂತ್ಯ ಸಮಯದಲ್ಲಿ ಆಗುವುದೋ? “ಮಿಲ್ಲೆನ್ನಿಯಮ”ದಲ್ಲೆಲ್ಲಾ ನ್ಯಾಯತೀರ್ವಿಕೆ ಇರುವುದೋ? ಅವರ ನ್ಯಾಯತೀರ್ಪು ಅವರ ಸಂದೇಶದಲ್ಲಿ ಕಂಡು ಬರುವುದೋ ಇಲ್ಲವೇ ಅಂತಿಮ ದಿನದಂದು ನ್ಯಾಯ ತೀರಿಸಲು ಅವರು ಕ್ರಿಸ್ತನೊಂದಿಗೆ ಕೂತುಕೊಳ್ಳುವರೋ?

ಒಬ್ಬನೇ ನ್ಯಾಯಾಧೀಶನು ಇರುವನೆಂದು ಯಾಕೋಬನು ಹೇಳಿದ್ದಾನೆ (ಯಾಕೋಬ 4:12) ಇದು ಯೇಸುವನ್ನು ಬಿಟ್ಟು ಇತರ ಎಲ್ಲರನ್ನೂ ತೆಗದು ಹಾಕುತ್ತದೆ. ಈ ಕಾರಣದಿಂದ ಮೇಲಿನ ವಾಕ್ಯಗಳು ಇತರರು ಜೀವನ ಹೋಲಿಕೆಗಳಿಂದ ನ್ಯಾಯತೀರಿಸುವರು ಎಂಬರ್ಥದಿಂದ ವ್ಯಾಖ್ಯಾನಿಸಲ್ಪಡತಕ್ಕದ್ದು. ಒಂದು ಒಳ್ಳೇ ವಿವರಣೆಯು ಯೇಸುವಿನ ಈ ಹೇಳಿಕೆ ಯಾಗಿರುವುದು: “ನ್ಯಾಯ ವಿಚಾರಣೆಯಲ್ಲಿ ನಿನೆವೆ ಪಟ್ಟಣದವರು ಈ ಸಂತತಿಯವರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು; ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರ ಕಡೆಗೆ ತಿರುಗಿ ಕೊಂಡರು: ಆದರೆ ಇಲ್ಲಿ ಯೋನನಿಗಿಂತಲೂ ಹೆಚ್ಚಿನವನಿದ್ದಾನೆ” (ಮತ್ತಾಯ 12:41).

## ಅದರ ಪ್ರಮಾಣ

ಯಾವ ಪ್ರಮಾಣದಿಂದ ಯೇಸುವು ನಮ್ಮ ಜೀವಿತಗಳನ್ನು ಅಳೆಯುವನು? ಪ್ರಕಟನೆ 20:12 ಹೀಗೆ ಹೇಳುತ್ತದೆ: “ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು: ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು: ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು.” ಈ ಪುಸ್ತಕಗಳು ಬೈಬಲಿನ ಪುಸ್ತಕಗಳಾಗಿರ ಬಹುದು.

ರೋಮಾಪುರ 2:16ರಲ್ಲಿ ಪೌಲನು ಸುವಾರ್ತೆಯು ನಮ್ಮ ನ್ಯಾಯ ತೀರ್ವಿಕೆಯ ತಳಹದಿಯಾಗಿರುವದೆಂದು ಹೇಳುತ್ತಿರಬಹುದು. ಹಾಗಿದ್ದರೂ ಈ ವಚನವನ್ನು ಹೆಚ್ಚು ಉತ್ತಮವಾಗಿ ಹೀಗೆ ಭಾಷಾಂತರಿಸುವ ಸಾಧ್ಯತೆಯಿದೆ: "... ನನ್ನ ಸುವಾರ್ತೆಯ ಪ್ರಕಾರವಾಗಿ, ಕ್ರಿಸ್ತನ ಯೇಸುವಿನ ಮುಖಾಂತರ ದೇವರು ಮನುಷ್ಯರ ರಹಸ್ಯಗಳಿಗೆ ನ್ಯಾಯತೀರಿಸುವನು."

ಯೇಸುವಿನಿಂದ ಒಂದು ಹೇಳಿಕೆಯು ಕ್ರೈಸ್ತ ಯುಗದಲ್ಲಿ ಪ್ರತಿಯೊಬ್ಬನು ಯಾವ ಪ್ರಮಾಣದಿಂದ ನ್ಯಾಯಹೊಂದುವನು ಎಂಬುದನ್ನು ಕುರಿತ ವಿಷಯವು ನಿರ್ಣಯಿಸಲ್ಪಡುವುದು. "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದ್ದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವದು ..." (ಯೋಹಾನ 12:48-50) ಎಂದು ಆತನು ಹೇಳಿದನು.

ಕ್ರೈಸ್ತ ಯುಗದ ಮೊದಲು ಜೀವಿಸಿದವರು ಇನ್ನೊಂದು ಪ್ರಮಾಣದಿಂದ ನ್ಯಾಯ ನಿರ್ಣಯ ಹೊಂದುವರು. "ಧರ್ಮ ಶಾಸ್ತ್ರವಿಲ್ಲದವರಾಗಿ ಪಾಪ ಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶ ಹೊಂದುವರು; ಆದರೆ ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪ ಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು. ಧರ್ಮಶಾಸ್ತ್ರವನ್ನು ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು" (ರೋಮಾಪುರ 2:12, 13) ಎಂದು ಪೌಲನು ಬರೆದನು. ಒಬ್ಬನು ನ್ಯಾಯತೀರ್ವಿಕೆಯ ತಳಹದಿಯು ಅವನು ಜೀವಿಸಿದ ಯುಗಕ್ಕಾಗಿ ದೇವರ ಬೇಡಿಕೆಯಾದದ್ದು ಆಗಿರುವುದು.

ಈ ಯುಗದಲ್ಲಿ ನಾವು ನ್ಯಾಯತೀರ್ಪು ಹೊಂದುವದರ ಅಳತೆಗೋಲು ನಮ್ಮ ದೇಹ ದಲ್ಲಿ ನಾವು ಮಾಡಿದ್ದಕ್ಕನುಗುಣವಾಗಿ ಯೇಸುವಿನ ವಾಕ್ಯವಿರುವುದು (2 ಕೊರಿಂಥ 5:10). ಇದು ನಾವು ಮಾಡಿದ ರಹಸ್ಯ ಸಂಗತಿಗಳನ್ನು (ರೋಮಾಪು 2:16), ನಾವು ಇತರರಿಗೆ ಹೇಗೆ ನ್ಯಾಯ ತೀರಿಸುತ್ತೇವೆ ಎಂಬುದನ್ನು (ಮತ್ತಾಯ 7:1, 2; ಯಾಕೋಬ 2:13), ನಮ್ಮ ಮಾತುಗಳನ್ನು (ಮತ್ತಾಯ 12:36, 37), ನಮ್ಮ ಕಾರ್ಯಗಳನ್ನು, ಕೃತಿಗಳನ್ನು (ಮತ್ತಾಯ 16:27; ರೋಮಾಪುರ 2:6; 1 ಪೇತ್ರ 1:17) ಮತ್ತು ನಮ್ಮ ಹೃದಯಗಳ ಉದ್ದೇಶಗಳನ್ನು (1 ಕೊರಿಂಥ 4:5) ಒಳಗೊಂಡಿರುತ್ತದೆ.

ಶುಭ ವಾರ್ತೆಯು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಡುವದರಿಂದ (ರೋಮಾಪುರ 3:25; ಅಪೊಸ್ತಲರ ಕೃತ್ಯ 2:38), ನಮಗೆ ಆತನ ರಕ್ತದಿಂದ ನಮ್ಮ ಪಾಪಗಳ ತೊಳೆಯುವಿಕೆಯು ಇರುವುದು ಆಗಿರುತ್ತದೆ (ಅಪೊಸ್ತಲರ ಕೃತ್ಯ 22:16; ಪ್ರಕಟನೆ 1:5). ಯಾವುದೇ ಪಾಪವು ನಮಗೆ ವಿರುದ್ಧವಾಗಿ ಹೊರಿಸಲ್ಪಡದೇ ನಾವು ಆತನ ಮುಂದೆ "ಪರಿಶುದ್ಧರೂ ನಿರ್ದೋಷಿಗಳೂ ನಿರಪರಾಧಿಗಳೂ" ಆಗಿ ನಿಲ್ಲಬಹುದು (ಕೊಲೊಸ್ಸೆ 1:22). ನಮ್ಮ ತಪ್ಪುಗಳು ಯೇಸುವಿನಿಂದ ಸರಿಪಡಿಸಲ್ಪಟ್ಟಿದೆ. ಇದು ಹೀಗಿರುವಲ್ಲಿ ದೇವರು ನಮ್ಮ ಪಾಪವನ್ನು ಇನ್ನೆಂದಿಗೂ ಜ್ಞಾಪಿಸಿಕೊಳ್ಳುವದಿಲ್ಲ (ಇಬ್ರಿಯ 8:12), ಆದುದರಿಂದ ನ್ಯಾಯ ತೀರ್ವಿಕೆಯ ದಿನದಂದು ಅವುಗಳನ್ನು ನಮಗೆ ವಿರೋಧವಾಗಿ ತರುವದಿಲ್ಲ.

ಆ ದಿನದಂದು ದೇವರಿಗೆ ಅತೀ ಮೆಚ್ಚಿಕೆಯುಳ್ಳವರು ಯಾರೂ ಇರುವದಿಲ್ಲ. ವ್ಯಕ್ತಿ ಗೌರವವಿಲ್ಲದೇ, ಪಕ್ಷಪಾತವಿಲ್ಲದೇ ಆತನು ನ್ಯಾಯತೀರಿಸುವನು (ರೋಮಾಪುರ 2:11; 1 ಪೇತ್ರ 1:17). ನಾವು ಆತನನ್ನು ಗೌರವಿಸಿದ್ದರೆ ಮತ್ತು ಆತನ ಚಿತ್ತಕ್ಕೆ ಸರಿಯಾಗಿ

ಜೀವಿಸಿದ್ದರೆ (ಮತ್ತಾಯ 7:21), ಆತನು ನಮ್ಮನ್ನು ಸ್ವೀಕರಿಸುವನು; ಆದರೆ ನಾವು ಆತನನ್ನು ಹಿಂಬಾಲಿಸಿರದಿದ್ದರೆ, ಆತನು ನಮ್ಮನ್ನು ತಿರಸ್ಕರಿಸುವನು.

ನ್ಯಾಯತೀರ್ಪು ನೀತಿ ಮತ್ತು ಪರಿಶುದ್ಧತೆಯ ಮೇಲೆ ಅವಲಂಭಿಸುವದರಿಂದ (ಅಪೊಸ್ತಲರ ಕೃತ್ಯ 17:31), ದೇವರ ಸ್ವಂತ ಪರಿಶುದ್ಧತೆಯು ಆತನ ಪ್ರಮಾಣವಾಗಿರುವುದು (1 ಪೇತ್ರ 1:15, 16). ಆದುದರಿಂದ ನಾವು ಯೇಸುವಿನಂತೆ ಬೆಳೆಯಬೇಕಾಗಿರುವುದು (ಎಫೆಸ 4:13) ಮತ್ತು ಆತನನ್ನು ನಮ್ಮ ಜೀವಿತಗಳಿಗಾಗಿ ಮಾದರಿಯನ್ನಾಗಿ ಉಪಯೋಗಿಸ ಬೇಕು (1 ಯೋಹಾನ 2:6). ಈ ಲೋಕದಲ್ಲಿ ನಾವು ಆತನ ಹಾಗೆ ಇದ್ದರೆ, ನ್ಯಾಯ ತೀರ್ವಿಕೆಯ ದಿನದಂದು ನಮಗೆ ಭರವಸೆಯಿರುವುದು (1 ಯೋಹಾನ 4:17).

ನಮ್ಮ ಬಗೆಗಿನ ಆತನ ಸಂಪೂರ್ಣ ಜ್ಞಾನದ ತಳಹದಿಯ ಮೇಲೆ (ಇಬ್ರಿಯ 4:13), ದೇವರು ಮರೆಯಾಗಿರಲಿ ಇಲ್ಲವೇ ಬಹಿರಂಗವಾಗಿರಲಿ ನಮ್ಮ ಪ್ರತಿಯೊಂದು ಕೃತ್ಯಕ್ಕೆ ನ್ಯಾಯ ತೀರಿಸುವನು (ಪ್ರಸಂಗಿ 12:14) ಇತರರಿಗೆ ದಯೆ ತೋರಿಸಿದವರಿಗೆ ಆತನು ದಯೆ ತೋರಿಸುವನು; ಹಾಗಿದ್ದರೂ "ದಯೆ ತೋರಿಸದವರಿಗೆ ನ್ಯಾಯತೀರ್ಪು ಕರುಣೆ ಯಿಲ್ಲದ್ದಾಗುವುದು" (ಮತ್ತಾಯ 5:7; ಯಾಕೋಬ 2:13).

ಹೆಚ್ಚು ದೊಡ್ಡ ಅವಕಾಶಗಳು, ಇಲ್ಲವೇ ಹೆಚ್ಚು ದೊಡ್ಡ ಮಹತ್ವದ ಸ್ಥಾನಗಳು ಕೊಡಲ್ಪಟ್ಟವರು ಹೆಚ್ಚು ಕಠಿಣತೆಯೊಂದಿಗೆ ನ್ಯಾಯತೀರಿಸಲ್ಪಡುವರು. ತಲಾಂತುಗಳ ಸಾಮ್ಯವು ನಮಗಿರುವಂಥದ್ದಕ್ಕೆ ಅನುಗುಣವಾಗಿ ನಾವು ಸೇವೆ ಮಾಡುವದನ್ನು ದೇವರು ಅಪೇಕ್ಷಿಸುತ್ತಾನೆ ಮತ್ತು ಆತನು ಅದಕ್ಕೆ ತಕ್ಕಹಾಗೆ ನ್ಯಾಯತೀರಿಸುವನು ಎಂಬುದನ್ನು ಉದಾಹರಿಸುತ್ತದೆ (ಮತ್ತಾಯ 25:14-30). ಈ ಸಾಮ್ಯದಲ್ಲಿ ಸ್ಥಾಪಿಸಲ್ಪಟ್ಟ ತತ್ವವನ್ನು ಈ ರೀತಿಯಲ್ಲಿ ಹೇಳಬಹುದು: "ಯಾವನಿಗೆ ಬಹಳವಾಗಿ ಕೊಟ್ಟದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು; ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು" (ಲೂಕ 12:48). ದೇವರ ವಾಕ್ಯದ ಬೋಧಕರು ಬಹಳ ಜವಾಬ್ದಾರಿಕೆಯ ಸ್ಥಾನದಲ್ಲಿರುವರು. ಆದುದರಿಂದ ದೇವರು ಎಚ್ಚರಿಸುತ್ತಾನೆ, "ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿನವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗ ಬೇಡಿರಿ" (ಯಾಕೋಬ 3:1). ಅವಕಾಶ ಮತ್ತು ಸಾಮರ್ಥ್ಯದ ಮೇಲೆ ಅವಲಂಭಿಸಿ ದೇವರ ನ್ಯಾಯತೀರ್ಪು ಇರುವುದು.

ನ್ಯಾಯತೀರ್ಪು ಅಂತಿಮವಾದದ್ದಾಗಿರುವುದು (ಮತ್ತಾಯ 25:31-46); ಆದುದರಿಂದ, ದೇವರೊಂದಿಗೆ ವಾದ ಮಾಡುವಂಥದ್ದು ವ್ಯರ್ಥವಾಗಿರುತ್ತದೆ. ತಮ್ಮ ಅವಿಧೇಯ ಜೀವಿತಗಳನ್ನು ಪ್ರತಿಪಾದಿಸಲು ಹುಡುಕುವವರಿಗೆ ಯೇಸುವು ಹೀಗೆ ಹೇಳುತ್ತಾನೆ: "ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿ ಹೋಗಿರಿ" (ಮತ್ತಾಯ 7:21-23).

ಪ್ರತಿಯೊಬ್ಬ ವ್ಯಕ್ತಿಯ ಜೀವಿತವನ್ನು ಪುನರಾವಲೋಕನ ಮಾಡುವ ಮೊದಲು ದೇವರು ಅವರ ಶಿಕ್ಷೆಯನ್ನು ತಿಳಿದವನಾಗಿರುತ್ತಾನೆ. ಬಹು ಸಮಯದ ವರೆಗೆ ಆತನು ತಿಳಿದಿರುವಂತೆ ಈಗಲು ದೇವರು ತಿಳಿದು ಕೊಂಡಿರುತ್ತಾನೆ (ಮತ್ತಾಯ 25:34). ತನ್ನವರು ಯಾರು ಎಂಬುದನ್ನು ತಿಳಿದಿರುತ್ತಾನೆ (2 ತಿಮೊಥೆ 2:19; ಯೋಹಾನ 10:14, 27). ಬಹಳ ಹಿಂದೆಯೇ ದುಷ್ಟರ ನ್ಯಾಯತೀರ್ವಿಕೆಯನ್ನು ಆತನು ಯೋಜಿಸಿರುವನು (2 ಪೇತ್ರ 2:3). ನ್ಯಾಯ ತೀರ್ವಿಕೆಯ ದಿನವು ಯಾರು ಪರಲೋಕಕ್ಕೆ ಹೋಗುವರು, ಯಾರು ನರಕಕ್ಕೆ ಹೋಗುವರು ಎಂದು ತನ್ನ ತಲೆ ಕೆದರಿಕೊಳ್ಳುವ ಯೇಸುವಿನ ಸಮಯವಾಗಿರುವದಿಲ್ಲ. ಯಾರು ಎಲ್ಲಿಗೆ ಹೋಗುವರು ಎಂಬುದನ್ನು ಆತನು ಆಗಲೇ

ಬಲ್ಲವನಾಗಿದ್ದಾನೆ. ನ್ಯಾಯತೀರ್ವಿಕೆಯ ದಿನದಂದು ಆತನು ನಮ್ಮೊಂದಿಗೆ ನಮ್ಮ ಜೀವಿತವನ್ನು ನೋಡುವನು, ಆತನು ನಮಗೆ ಕೊಡುವ ತೀರ್ಪುಗಳ ನೀತಿಯನ್ನು ನಾವು ಅರ್ಥಮಾಡಿಕೊಳ್ಳುವಂತೆ ವಿವರಿಸುವನು, ಮತ್ತು ಆಗ ನಮ್ಮ ಶಿಕ್ಷೆಗಳನ್ನು ಘೋಷಿಸುವನು.

## ಅದರ ವ್ಯಾಪ್ತಿ

"ಎಲ್ಲರೂ" ನ್ಯಾಯತೀರ್ಪಿಗೆ ಒಳಗಾಗುವರು ಎಂದು ಯಾವ ತಪ್ಪೂ ಇಲ್ಲದೇ ಬೈಬಲ್ ಹೇಳುತ್ತದೆ (ಯೂದ 15). ಸತ್ತವರ ಎಲ್ಲಾ ದೇಹಗಳು ಎಬ್ಬಿಸಲ್ಪಡದಿದ್ದರೆ ಇದು ಸಂಭವಿಸಲಾರದು. ದೇವರು ಎಲ್ಲಾ ಜನರಿಗೆ ನ್ಯಾಯತೀರಿಸಲು ಯೋಚಿಸಿರುವನೆಂಬುದುಕ್ಕೆ ಯೇಸುವಿನ ಪುನರುತ್ಥಾನವು ರುಜುವಾತಾಗಿರುತ್ತದೆ (ಅಪೊಸ್ತಲರ ಕೃತ್ಯ 17:31). ನ್ಯಾಯವಿಚಾರಣೆ ಹೊಂದಲು (2 ಕೊರಿಂಥ 5:10; 1 ಪೇತ್ರ 4:4, 5; 2 ಪೇತ್ರ 2:9 ದುಷ್ಟರೂ ನೀತಿವಂತರೂ ಎಬ್ಬಿಸಲ್ಪಡುವರೂ (ಯೋಹಾನ 5:28-29; ಅಪೊಸ್ತಲರ ಕೃತ್ಯ 24:15). ಇದು ಎಲ್ಲಾ ಜನಾಂಗಗಳ ಒಳ್ಳೆಯವರನ್ನು ಕೆಟ್ಟವರನ್ನೂ (ಮತ್ತಾಯ 25:31-46), ಸತ್ತುಹೋದ ಎಲ್ಲಾ ನೀತಿವಂತರನ್ನೂ ದುಷ್ಟರನ್ನೂ (ಪ್ರಕಟನೆ 20:11-15) ಮತ್ತು ಬಹುಶಃ ದೇವದೂತರನ್ನೂ (1 ಕೊರಿಂಥ 6:3; 2 ಪೇತ್ರ 2:4) ಒಳಗೊಂಡಿರುವುದು. ನ್ಯಾಯ ತೀರ್ವಿಕೆಯಲ್ಲಿ ಸೈತಾನನಿಗೂ ಅವನ ದೂತರಿಗೂ ಹೇಳಿಕೆಯಿರಲಿಕ್ಕಿಲ್ಲ. ಅವರನ್ನು ಶಿಕ್ಷಿಸುವದರಲ್ಲಿ ತನ್ನ ನೀತಿಯುಳ್ಳ ತೀರ್ಪನ್ನು ತೋರಿಸುವದಕ್ಕಾಗಿ ಅವರೊಂದಿಗೆ ದೇವರು ಅವರ ದಾಖಲೆಗಳನ್ನು ಪರಾಮರ್ಶಿಸದಷ್ಟು ಅವರ ದಂಡನೆಗೆ ಕಾರಣವಾಗಿರುವದು (ಮತ್ತಾಯ 25:41; ಪ್ರಕಟನೆ 20:10).

## ಮುಕ್ತಾಯ

"ಜಗತ್ತಿಗೆ ನೀತಿಯಲ್ಲಿ ನ್ಯಾಯತೀರಿಸುವದಕ್ಕೆ" ಆತನನ್ನು ಬಲಿಸುವಂಥದ್ದು ದೇವರ ನ್ಯಾಯವಾಗಿದೆ (ಅಪೊಸ್ತಲರ ಕೃತ್ಯ 17:31), ಆತನು ನ್ಯಾಯತೀರಿಸುವದರಲ್ಲಿ ನ್ಯಾಯವುಳ್ಳವನಾಗಿರುತ್ತಾನೆ (ಯೋಹಾನ 5:30). ನ್ಯಾಯ ತೀರ್ಪು ಗಂಭೀರವಾದ ವಿಷಯವಾಗಿದೆ: "ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೆ. ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು" (ಇಬ್ರಿಯ 10:30, 31). ಬೇಕು ಬೇಕೆಂತಲೇ ದೇವರಿಗೆ ಅವಿಧೇಯರಾಗುವವರಿಗೆ, "ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪೂ ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ" ಇರುವವು (ಇಬ್ರಿಯ 10:26, 27).

ನಾವು ಆತನಿಗೆ ವಿಧೇಯರಾಗುವವರಾದರೆ, ದೇವರ ಪ್ರೀತಿಯು ನಮಗೆ ರಕ್ಷಣೆಯನ್ನು ಒದಗಿಸಿರುವುದು (ಯೋಹಾನ 3:16). ಕ್ರೈಸ್ತರಾಗಲು ಆತನ ಆಜ್ಞೆಗಳು ಇವಾಗಿರುತ್ತವೆ: ನಮ್ಮ ಪಾಪಗಳಿಗಾಗಿ ಮಾನಸಾಂತರ ಪಡುವುದು (ಅಪೊಸ್ತಲರ ಕೃತ್ಯ 17:30, 31), ಯೇಸುವು ದೇವರ ಕುಮಾರನಾಗಿದ್ದಾನೆಂದು ಅರಿಕೆ ಮಾಡುವುದು (ರೋಮಾಪುರ 10:10) ಮತ್ತು ಬಾಪ್ತಿಸ್ಮ ಹೊಂದುವುದು (ಅಪೊಸ್ತಲರ ಕೃತ್ಯ 2:38; 22:16). ಆಗ ನಾವು ಆತನ ಮಕ್ಕಳಂತೆ ಬೆಳೆಯುತ್ತ ಪ್ರೌಢಾವಸ್ಥೆಗೇರುವುದು (1 ಪೇತ್ರ 2:2). ದೇವರ ಚಿತ್ತವನ್ನು ಬೋಧಿಸುತ್ತ ಆ ದಿನಕ್ಕಾಗಿ ಸಿದ್ಧ ಪಡಿಸಲು ಇತರರಿಗೆ ಸಹಾಯ ಮಾಡ ಬೇಕು ಮತ್ತು ನಮ್ಮನ್ನು ಸಿದ್ಧ ಪಡಿಸಿಕೊಳ್ಳತಕ್ಕದ್ದು.

ಟಿಪ್ಪಣಿಗಳು

[1]*Tartaros* ಎಂಬ ಗ್ರೀಕ ಪದವು, ಅದರಿಂದ "Tartarus" ಎಂಬ ಪದವನ್ನು ಪಡೆದು ಕೊಳ್ಳುತ್ತೇವೆ, ಬೈಬಲಿನಲ್ಲಿ ಒಂದು ಸಲ ಮಾತ್ರ 2 ಪೇತ್ರ 2:4ರಲ್ಲಿ ಕಂಡು ಬರುತ್ತದೆ. ಹೆಚ್ಚಾದ ಆವೃತ್ತಿಗಳಲ್ಲಿ ಇದು "ನರಕ" (hell) ಎಂದು ಭಾಷಾಂತರಿಸಲ್ಪಟ್ಟಿದ್ದರೂ, ಇದನ್ನು Hades, ಸತ್ತವರ ಸ್ಥಳ ಎಂಬದರೊಂದಿಗೆ ಇಲ್ಲವೇ Gehenna, ಉರಿಯುವ ನಿತ್ಯವಾದ ಸ್ಥಳದೊಂದಿಗೆ ಗಲಿಬಿಲಿಗೊಳಿಸಬಾರದು. "ಸತ್ತವರ ಮಧ್ಯಮ ಸ್ಥಳ" ಎಂಬ ಪಾಠವನ್ನು ಹೆಚ್ಚಿನ ಮಾಹಿತಿಗಾಗಿ ನೋಡಿರಿ. [2]ದೇವರು, ಆದಾಮ ಮತ್ತು ಹವ್ವರ (ಆದಿಕಾಂಡ 3:19-23), ಕಾಯಿನನ (ಆದಿಕಾಂಡ 4:9-12), ನೋಹನ ಲೋಕದ (ಅದಿಕಾಂಡ 6:5-7), ಸೊದೋಮ ಮತ್ತು ಗೊಮೋರಗಳ (ಆದಿಕಾಂಡ 19:27-29), ಐಗುಪ್ತದ (ವಿಮೋಚನಕಾಂಡ 12:12), ನಾದಾಬ ಮತ್ತು ಅಬೀಹು (ಯಾಜಕಕಾಂಡ 10:1-3), ಮಿರಿಯಾಮ ಮತ್ತು ಆರೋನನ (ಅರಣ್ಯಕಾಂಡ 12:1-15), ಕೋರಹನ (ಅರಣ್ಯಕಾಂಡ 16:1-49), ಮೋಶೆಯ (ಅರಣ್ಯಕಾಂಡ 20:10-12), ಉಜ್ಜನ (2 ಸಮುವೇಲ 6:6-8), ದಾವೀದನ (2 ಸಮುವೇಲ 12:1-14), ಇಸ್ರಾಯೇಲಿನ ರಾಜ್ಯಗಳ (2 ಅರಸು 17:7-18) ಮತ್ತು ಯೆಹೂದ ರಾಜ್ಯಗಳ (2 ಪೂರ್ವಕಾಲವೃತ್ತಾಂತ 36:15-21) ಮತ್ತು ಇತರ ಅನೇಕರ ನ್ಯಾಯ ತೀರಿಸಿದನು. [3]"ಕರ್ತನ" ಎಂಬುದ ಗ್ರೀಕ ವಿಶೇಷಣ *kuriakos*, ಇದು 1 ಕೊರಿಂಥ 11:20ರಲ್ಲಿಯು ಉಪಯೋಗಿಸಲ್ಪಟ್ಟಿದೆ. [4]H. Waterman, "The Lord's Day," *The Zondervan Pictorial Encyclopedia of the Bible*, vol. 3, ed. Merrill C. Tenny (Grand Rapids, Mich.: Zondervan, 1975), 965. W. E. Vine, Merrill F. Unger, and William White, Jr., "Day," *Vine's Complete Expository Dictionary of Old and New Testament Words* (Nashville: Thomas Nelson Publishers, 1985), 146. [5]ನೋಡಿರಿ ಮತ್ತಾಯ 16:27; ಅಪೊಸ್ತಲರ ಕೃತ್ಯ 10:42; 17:31; 2 ತಿಮೊಥೆ 4:1.

© 2009 Truth for Today